ದಿನಾಂಕಃ **09.03.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್.ಟಿ.ಟಿ. ವಕೀಲರಿಂದಃ

ನನ್ನ ಮಗನ ಮದುವೆಗೆ ಸಂಬಂಧಿಸಿದ ಮೂರು ಭಾವ ಚಿತ್ರಗಳನ್ನು ಸಿಡಿಯೊಂದಿಗೆ ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ**-52** ರಿಂದ **55** ಎಂದು ಗುರುತಿಸಲಾಯಿತು. ಅದೇರೀತಿಯಾಗಿ ನನ್ನ ಮಗನ ಮದುವೆಗೆ ಸಂಬಂಧಿಸಿ ಚಿತ್ರೀಕರಣದ ಎರಡು ಸಿಡಿಗಳನ್ನು ಹಾಜರುಪಡಿಸಿರುತ್ತೇನೆ ಸದರಿ ಸಿಡಿಗಳನ್ನು ನ್ಯಾಯಾಲಯದ ಮುಂದೆ ಪ್ರದರ್ಶಿಸಿ ನೋಡಿ ನಂತರ ಅವುಗಳನ್ನು ಕ್ರಮವಾಗಿ ನಿಪಿ**-56** ಮತ್ತು **57** ಎಂದು ಗುರುತಿಸಲಾಯಿತು. ನಿಪಿ-52 ರಿಂದ 57 ಕ್ಕೆ ಸಂಬಂಧಿಸಿದಂತೆ ಭಾರತೀಯ ಸಾಕ್ಷ ಅಧಿನಿಯಮ ಕಲಂ65 ಬಿ ರಡಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ**-58** ಎಂದು ಗುರುತಿಸಲಾಯಿತು. ನಿಪಿ-56 ಮತ್ತು 57 ಕ್ಕೆ ಸಂಬಂಧಿಸಿದ ರಸೀದಿಯನ್ನು ನಿಪಿ**-59** ಎಂದು ಗುರುತಿಸಲಾಯಿತು. ನನ್ನ ಮಗನ ಮದುವೆಯ ವಿವಾಹ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ**-60** ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಎಸ್.ಆರ್.ಆರ್. ವಕೀಲರಿಂದಃ

ನನ್ನ ಮಗನ ಮದುವೆಯ ಪೂರ್ವದಲ್ಲಿ ಲಗ್ನ ಪತ್ರಿಕೆ ಬರೆಯುವಂತಹ ಶಾಸ್ತ್ರವನ್ನು ಮಾಡಿರುತ್ತೇವೆ. ಸದರಿ ಲಗ್ನ ಪತ್ರಿಕೆ ಬರೆಯುವ ಶಾಸ್ತ್ರಕ್ಕೆ 1 ನೇ ಪ್ರತಿವಾದಿಯನ್ನು ಕರೆದಿರುತ್ತೇವೆ ಆದರೆ ಅವರು ಬಂದಿರುವುದಿಲ್ಲ. ಲಗ್ನ ಪತ್ರಿಕೆ ಬರೆಯುವ ದಿನದಂದು ಭಾವ ಚಿತ್ರ/ಫೋಟೋ

ತೆಗೆದಿರುವುದಿಲ್ಲ. ನನ್ನ ಮಗನ ಮದುವೆಯ ಚಿತ್ರೀಕರಣವನ್ನು ಮತ್ತು ಭಾವ ಚಿತ್ರ ತೆಗೆಯುವ ಕೆಲಸವನ್ನು ನಿಹಾರ್ ಸ್ಟುಡಿಯೋದವರಿಗೆ ಹೇಳಿದ್ದೇವು. ಅವರಿಗೆ ಎಷ್ಟು ಹಣ ಪಾವತಿಸಿಬೇಕೆಂದು ನಿಗದಿ ಪಡಿಸಿದ್ದೇವು ಎಂದು ನೆನಪಿಲ್ಲ. ಫೋಟೋ ಸ್ಟುಡಿಯೋದವರಿಗೆ ಸುಮಾರು 30 ಸಾವಿರ ಪಾವತಿಸಿರುತ್ತೇನೆ. ಸದರಿ ಹಣ ಪಾವತಿಸಿರುವುದಕ್ಕೆ ರಸೀದಿ ನೀಡಿದ್ದರು ಸದರಿ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಹಲವಾರು ದಿನಗಳು ಆದ ಕಾರಣ ಅದು ಸಿಕ್ಕಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ-52 ರಿಂದ 54 ರಂತೆ ಭಾವಚಿತ್ರಗಳನ್ನು ತೆಗೆದ ವ್ಯಕ್ತಿಯ ಹೆಸರು ಗೊತ್ತಿರುವುದಿಲ್ಲ ಆದರೆ ನಿಹಾರ್ ಸ್ಟುಡಿಯೋದ ಕಡೆಯಿಂದ ಬಂದವರು ತೆಗೆದಿರುತ್ತಾರೆ. ಇಂದಿಗೂ ಸದರಿ ನಿಹಾರ್ ಸ್ಟುಡಿಯೋ ಅಸ್ಥಿತ್ವದಲ್ಲಿ ಇರುತ್ತದೆ. ಆದರೆ ಅದರ ಆಗಿನ ಮಾಲಿಕರು ಬಗ್ಗೆ ಮತ್ತು ಈಗಿನ ಮಾಲಿಕರ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2. ಸಾಮಾನ್ಯವಾಗಿ ನಮ್ಮ ಕುಟುಂಬದಲ್ಲಿ ಮದುವೆ ಗಂಡಿಗೆ ಅವರ ಸೋದರ ಮಾವ ಕಾಲುಂಗುರ ತೋಡಿಸುತ್ತಾರೆ. ನನ್ನ ಮಗನಿಗೆ ಕಾಲುಂಗುರವನ್ನು ನನ್ನ ಹೆಂಡತಿಯ ಅಣ್ಣ ಚಿಕ್ಕರಂಗಯ್ಯ ತೋಡಿಸಿರುತ್ತಾರೆ. ನನ್ನ ಮಗನ ಮದುವೆಯಲ್ಲಿ ಸೋದರ ಮಾವ ಮಾಡಬೇಕಾಗಿದ್ದಂತಹ ಎಲ್ಲಾ ಶಾಸ್ತ್ರಗಳನ್ನು ಚಿಕ್ಕರಂಗಯ್ಯ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮಗನ ಮದುವೆ ದಿಃ19.05.2006 ರಂದು ಸಿರಾ ನಗರದಲ್ಲಿರುವ ಕನ್ನಿಕಾ ಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. 2005-06 ರಲ್ಲಿ ಸಿಡಿಗಳು ಅಸ್ಥಿತ್ವದಲ್ಲಿ ಇರಲಿಲ್ಲ ಎಂದರೆ ಸರಿ. ನನ್ನ ಮಗನ ಮದುವೆಯ ಚಿತ್ರೀಕರಣವನ್ನು ಕ್ಯಾಸೇಟ್ ಗಳಲ್ಲಿ ಮಾಡಿದ್ದರು, ಅದನ್ನು ಸಿಡಿಗಳಿಗೆ ಕಾಫಿ/ನಕಲು ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಕ್ಯಾಸೇಟ್ ಗಳು ಮನೆಯಲ್ಲಿ ಇರುತ್ತವೆ.

3. 1 ನೇ ಪ್ರತಿವಾದಿಯ ಭಾವಚಿತ್ರವನ್ನು ಬೇರೆಕಡೆಯಿಂದ ಪಡೆದುಕೊಂಡು, 1 ನೇ ಪ್ರತಿವಾದಿ ನನ್ನ ಮಗನ ಮದುವೆಗೆ ಬಂದಿದ್ದರು ಎಂದು ಭಾವಚಿತ್ರಗಳನ್ನು ಮತ್ತು ವಿಡಿಯೋ ಗ್ರಫಿಯನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಿಪಿ-52 ರಿಂದ 55 ಭಾವಚಿತ್ರಗಳು ಮೂಲ ಪ್ರತಿಗಳು ಆಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ ನಿಪಿ-56 ಮತ್ತು 57 ನ್ನು ದಿ:24.11.2025 ರಂದು ರಾಜು ಸ್ಟುಡಿಯೋದವರು ನಕಲು ಮಾಡಿಕೊಟ್ಟಿರುತ್ತಾರೆ.ಅದಕ್ಕೆ ಸಂಬಂಧಿಸಿದಂತೆ ರಾಜು ಸ್ಟುಡಿಯೋದಿಂದ ನಿಪಿ-59 ರಂತೆ ರಸೀದಿಯನ್ನು ನೀಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ